11) 'ಒಂದುಗೂಡಿಸಲಾದ ಹುದ್ದೆಗಳು(Pooled Posts) ಎಂದರೆ ಕೆಂಪೇಗೌಡ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ಅಂಡ್ ರಿಸರ್ಚ್, ಶ್ರೀಗಂಧದಕಾವಲು, ಬೆಂಗಳೂರು ಸಂಸ್ಥೆಯಲ್ಲಿ ಸಾಮಾನ್ಯ ವರ್ಗದ ಹುದ್ದೆಗಳಾಗಿದ್ದು(common cadre) ಜೇಷ್ಠತೆ, ಮುಂಬಡ್ತಿ ಮತ್ತು ರಾಜ್ಯ ಒಕ್ಕಲಿಗರ ಸಂಘದ ಇತರೆ ಸಂಸ್ಥೆಗಳಲ್ಲಿ ಅಂತರ-ವರ್ಗಾವಣೆ ಸಲುವಾಗಿ ಷೆಡ್ಯೂಲ್-II ರಲ್ಲಿ ಒಂದುಗೂಡಿಸಲಾದ ಹುದ್ದೆಗಳು.

12) 'ಆಯ್ಕೆ ಮಂಡಳಿ' (Board of Selection) ಎಂದರೆ ಈ ನಿಯಮಾವಳಿಗಳಲ್ಲಿ ವಿವಿಧ ವರ್ಗಗಳ ಹುದ್ದೆಗಳಿಗೆ ನಿಗದಿಪಡಿಸಿದ ಆಯ್ಕೆ ಮಂಡಳಿಗಳು.

13) 'ಉನ್ನತ ನಿಯಂತ್ರಣ ಪ್ರಾಧಿಕಾರ (Apex Body) ಎಂದರೆ ವಿಶ್ವವಿದ್ಯಾಲಯ ಧನಸಹಾಯ ಆಯೋಗ ಆಗಿರುತ್ತದೆ.

14) 'ರಾಜ್ಯ' ಎಂದರೆ ಕರ್ನಾಟಕ ರಾಜ್ಯ.

ಈ ನಿಯಮಾವಳಿಗಳಲ್ಲಿ ನಿರ್ದಿಷ್ಠವಾಗಿ ವ್ಯಾಖ್ಯಾನಿಸದಿರುವ ಇತರ ಪರಿಭಾಷೆಗಳು ವಿಶ್ವವಿದ್ಯಾಲಯ ಧನಸಹಾಯ ಆಯೋಗ (ಯು.ಜಿ.ಸಿ.) ಹೊರಡಿಸಿರುವ ಮಾರ್ಗಸೂಚಿಗಳಂತೆ ಹಾಗೂ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ/ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಿಗದಿಪಡಿಸಿದಂತೆ ಇರತಕ್ಕದ್ದು ಮತ್ತು ಅವುಗಳನ್ನು ಕೆಂಪೇಗೌಡ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ಅಂಡ್ ರಿಸರ್ಚ್, ಶ್ರೀಗಂಧದಕಾವಲು, ಬೆಂಗಳೂರು ಸಂಸ್ಥೆಗೆ ಅನ್ವಯವಾಗುವಷ್ಟರ ಮಟ್ಟಿಗೆ ಅರ್ಥೈಸಿಕೊಳ್ಳುವುದು.

**5. <u>ಸಿಬ್ಬಂದಿ ನೇಮಕಾತಿ:</u>**

(ಅ) ಖಾಯಂ ಅಥವಾ ತಾತ್ಕಾಲಿಕ ಹುದ್ದೆಗಳನ್ನು ಸಂಬಂಧಪಟ್ಟ ಸಂಸ್ಥೆಯ ಮುಖ್ಯಸ್ಥರ ಪ್ರಸ್ತಾವನೆ ಮೇರೆಗೆ ಹಾಗೂ ನೇಮಕಾತಿಯ ಅವಶ್ಯಕತೆಗನುಗುಣವಾಗಿ ಕಾರ್ಯಕಾರಿ ಸಮಿತಿಯು ಈ ನಿಯಮಾವಳಿಗಳನ್ವಯ ಮಾತ್ರ ನೇಮಿಸಿಕೊಳ್ಳತಕ್ಕದ್ದು. ಷೆಡ್ಯೂಲ್-Iರಲ್ಲಿ ನಮೂದಿಸಿದ ಹುದ್ದೆಗಳ ಮಿತಿಯನ್ನು ಮೀರಿ ಯಾವುದೇ ನೇಮಕಾತಿ ಮಾಡಿಕೊಳ್ಳುವಂತಿಲ್ಲ.

(ಆ) ಕೆಂಪೇಗೌಡ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ಅಂಡ್ ರಿಸರ್ಚ್ ಹಾಲಿ ಅನುದಾನರಹಿತ ಸಂಸ್ಥೆಯಾಗಿದೆ. ಮ್ಯಾನೇಜ್‌ಮೆಂಟ್‌ನವರು ಈ ಸಂಸ್ಥೆಯನ್ನು ಆದಷ್ಟು ಶೀಘ್ರವಾಗಿ ಸರ್ಕಾರದ ಸಹಾಯಾನುದಾನಕ್ಕೆ ಒಳಪಡಿಸಲು ಕ್ರಮವಹಿಸುವುದು. ಸಂಸ್ಥೆಯು ಸಹಾಯಾನುದಾನಕ್ಕೆ (Grant-in-aid) ಒಳಪಟ್ಟ ನಂತರ ಮುಂದಿನ ಎಲ್ಲಾ ನೇಮಕಾತಿಗಳನ್ನು ವೇತನಾನುದಾನ ಪಡೆಯುವ ಹುದ್ದೆಗಳಿಂದು ಮಾತ್ರ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ತುಂಬತಕ್ಕದ್ದು.

**6. <u>ಬೋಧಕ ಸಿಬ್ಬಂದಿ ಮಾದರಿ ಮತ್ತು ವಿದ್ಯಾರ್ಥಿಗಳ ಪ್ರವೇಶಾತಿ:</u>**

(i) ವಿಶ್ವವಿದ್ಯಾಲಯ ಧನಸಹಾಯ ಆಯೋಗವು (ಯು.ಜಿ.ಸಿ.) ಪದವಿ ಮತ್ತು ಸ್ನಾತಕೋತ್ತರ ಪದವಿ ಕೋರ್ಸುಗಳ ಕಾಲೇಜುಗಳಲ್ಲಿ ಇರಬೇಕಾದ ಸಿಬ್ಬಂದಿ ಮಾದರಿಯನ್ನು ನಿಗದಿಪಡಿಸಿದೆ. ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ ಇವರು ಒಟ್ಟು ವಿದ್ಯಾರ್ಥಿಗಳ ಪ್ರವೇಶಾತಿ ಸಂಖ್ಯೆಗೆ ಅನುಗುಣವಾಗಿ ಕಾಲೇಜುಗಳಲ್ಲಿನ ಬೋಧಕೇತರ ಸಿಬ್ಬಂದಿ ನೇಮಕಾತಿಗೆ ಹಾಗೂ ಇತರೇ ಸೇವಾ ಷರತ್ತುಗಳಿಗೆ ಸಂಬಂಧಿಸಿದಂತೆ ಮಾರ್ಗಸೂಚಿಗಳನ್ನು ನಿಗದಿಪಡಿಸಿರುತ್ತಾರೆ. ಈ ಸಿಬ್ಬಂದಿ ಮಾದರಿ ಕೆಂಪೇಗೌಡ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ಅಂಡ್ ರಿಸರ್ಚ್, ಶ್ರೀಗಂಧದಕಾವಲು, ಬೆಂಗಳೂರು ಸಂಸ್ಥೆಗೆ ಅನ್ವಯವಾಗುತ್ತದೆ.

